ಕರ್ನಾಟಕ ಸರ್ಕಾರ

*ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.*

ಸಂಖ್ಯೆ: ಪಪೂಶಿಇ/ಶೈ.ಶಾ-4/ತರಬೇತಿ/ಅ.ಬಿ/2016-17 ದಿನಾಂಕ:13-2-2017

ಜ್ಞಾಪನ

ವಿಷಯ: 2016-17ನೇ ಶೈಕ್ಷಣಿಕ ಸಾಲಿನಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯು ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ ಹಮ್ಮಿಕೊಳ್ಳಲಾಗಿದ್ದ ರಾಜ್ಯ/ವಿಭಾಗ/ ಕ್ಲಸ್ಟರ್/ಜಿಲ್ಲಾಮಟ್ಟದ ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ: 1. ಸರ್ಕಾರದ ಅದೇಶ ಪತ್ರ ಸಂಖ್ಯೆ: ಇಡಿ 189 ಯೋಯೋಕ 2016, ಬೆಂಗಳೂರು, ದಿನಾಂಕ: 02-11-2016.

2. ಈ ಕಛೇರಿ ಜ್ಞಾಪನ ಸಂಖ್ಯೆ:ಪಪೂಶಿಇ/ಶೈಶಾ-04/ತ.ಕಾ/3/2/2016-17, ದಿನಾಂಕ: 14-11-2016.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪದವಿ ಪೂರ್ವ ಶಿಕ್ಷಣ ಇಲಾಖೆಯು 2016-17ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ ರಾಜ್ಯ/ವಿಭಾಗ/ ಕ್ಲಸ್ಟರ್/ಜಿಲ್ಲಾಮಟ್ಟದಲ್ಲಿ 20 ವಿಷಯಗಳಲ್ಲಿ ದಿನಾಂಕ 26-11-2016 ರಿಂದ 03-01-2017 ರವರೆಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಉಲ್ಲೇಖ-02ರಲ್ಲಿ ತರಬೇತಿ ಕಾರ್ಯಕ್ರಮಗಳ ವೇಳಾಪಟ್ಟಿ, ಸಮಿತಿ ಮತ್ತು ಸಂಯೋಜಕರ ಜವಾಬ್ದಾರಿಗಳೊಂದಿಗೆ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡುವ ಅನುದಾನಕ್ಕೆ ಖರ್ಚು ವೆಚ್ಚಗಳನ್ನು ಬಳಸಲು ರೂಪರೇಷಗಳನ್ನು ನೀಡಲಾಗಿತ್ತು ಅದರಂತೆ ಕಾರ್ಯಕ್ರಮ ಮುಗಿದ ನಂತರ ತರಬೇತಿಯನ್ನು ನಡೆಸಲು ವೆಚ್ಚ ಮಾಡಿರುವ ಅನುದಾನವನ್ನು ಬಿಡುಗಡೆ ಮಾಡಲು ಕೋರಿಕೆಯನ್ನು ಜಿಲ್ಲಾ ಉಪನಿರ್ದೇಶಕರುಗಳು ಕೇಂದ್ರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿತ್ತು.

ಅದರಂತೆ ತರಬೇತಿ ಕಾರ್ಯಕ್ರಮಕ್ಕೆ ಪೆನ್/ಫೈಲ್/ಪ್ಯಾಡ್, ಕಾಫಿ/ಟೀ/ಬಿಸ್ಕೆಟ್ಸ್ / Working Lunch /ಕುಡಿಯುವ ನೀರು, ಸಂಪನ್ಮೂಲ ವ್ಯಕ್ತಿಗಳ ಸಂಬಾವನೆ, ಶಿಬಿರಾರ್ಥಿಗಳಿಗೆ/ ಸಂಪನ್ಮೂಲ ವ್ಯಕ್ತಿಗಳಿಗೆ/ ಸಂಯೋಜಕರಿಗೆ ಹಾಗೂ ಉಪನ್ಯಾಸಕರುಗಳಿಗೆ KCSR ನಿಯಮಾನುಸಾರ ಪ್ರಯಾಣಭತ್ಯೆ, ದಿನಭತ್ಯೆ ಮತ್ತು ಸಾದಿಲ್ವಾರು ಸೇರಿ ಪಟ್ಟಿಯಲ್ಲಿರುವಂತೆ ಅನುದಾನವನ್ನು ವೆಚ್ಚ ಮಾಡಿರುತ್ತಾರೆ. ಈಲ್ಲಾ ಉಪನಿರ್ದೇಶಕರುಗಳು ವೆಚ್ಚ ಮಾಡಿರುವ ಅನುದಾನವನ್ನು ಲೆಕ್ಕಶೀರ್ಷಿಕೆ: 2202-02-001-0-01-059

(ಯೋಜನೆ)ರಲ್ಲಿ ಒದಗಿಸಿರುವ ಅನುದಾನದಲ್ಲಿ ರಾಜ್ಯದ 31 ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರ ಕೋರಿಕೆಯಂತೆ ರೂ 33,921,408/-(ರೂ ಮೂರು ಕೋಟಿ ಮೂವತ್ತ ಒಂಭತ್ತು ಲಕ್ಷದ ಇಪ್ಪತ್ತೊಂದು ಸಾವಿರದ, ನಾಲ್ಕು ನೂರು ಎಂಟು ರೂಗಳನ್ನು ಮಾತ್ರ) ಗಳನ್ನು ಹಂಚಿಕೆ ಮಾಡುವ ಕುರಿತು ಈ ಕೆಳಕಂಡಂತೆ ಆದೇಶಿಸಿದೆ.

*ಸದರಿ ತರಬೇತಿ (ಜಿಲ್ಲಾ/ಕ್ಲಸ್ಟರ್, ವಿಭಾಗ ಹಾಗೂ ರಾಜ್ಯ ಮಟ್ಟದಲ್ಲಿ ನಡೆದ)ಕಾರ್ಯಕ್ರಮಕ್ಕೆ ಜಿಲ್ಲಾ ಉಪನಿರ್ದೇಶಕರುಗಳ ಪದವಿ ಪೂರ್ವ ಶಿಕ್ಷಣ ಇಲಾಖೆ ರವರ ಕೋರಿಕೆಯಂತೆ ಅನುದಾನ ಬಿಡುಗಡೆ ಮಾಡಲಾಗಿದೆ.*

| sl.no | District | Dist/ cluster | Division | State | totol amount should be released to DDPUE |
|---|---|---|---|---|---|
| 1 | ಬೆಂಗಳೂರು-ಉತ್ತರ | 618,744.00 | 929,700.00 | 46,400.00 | 1,594,844.00 |
| 2 | ಬೆಂಗಳೂರು-ದಕ್ಷಿಣ | 686,913.00 | 289,323.00 | 418,193.00 | 1,394,429.00 |
| 3 | ರಾಮನಗರ | 233,114.00 | | | 233,114.00 |
| 4 | ಬಳ್ಳಾರಿ | 827,795.00 | | | 827,795.00 |
| 5 | ಬೆಳಗಾವಿ | 310,000.00 | | 95,000.00 | 405,000.00 |
| 6 | ಬಾಗಲಕೋಟ | | 1,024,157.00 | | 1,024,157.00 |
| 7 | ವಿಜಾಪುರ | 2,775,400.00 | 560,500.00 | 937,224.00 | 4,273,124.00 |
| 8 | ಬೀದರ | | 672,329.00 | | 672,329.00 |
| 9 | ದಾವಣಗೆರೆ | 938,445.00 | | 237,415.00 | 1,175,860.00 |
| 10 | ಚಿತ್ರದುರ್ಗ | 963,252.00 | 345,342.00 | | 1,308,594.00 |
| 11 | ಗದಗ | 566,614.00 | 433,386.00 | | 1,000,000.00 |
| 12 | ಹಾವೇರಿ | 528,641.00 | | | 528,641.00 |
| 13 | ಧಾರವಾಡ | 524,531.00 | 374,371.00 | | 898,902.00 |
| 14 | ಗುಲ್ಬರ್ಗಾ | 1,406,791.00 | 835,743.00 | 229,966.00 | 2,472,500.00 |
| 15 | ಹಾಸನ | 1,025,952.00 | 302,059.00 | | 1,328,011.00 |
| 16 | ಚಿಕ್ಕಬಳ್ಳಾಪುರ | 329,544.00 | | | 329,544.00 |

| | | | | | |
|---|---|---|---|---|---|
| 17 | ಕೋಲಾರ | 284,568.00 | | | 284,568.00 |
| 18 | ಚಾಮರಾಜನಗರ | 459,817.00 | | | 459,817.00 |
| 19 | ಮಂಡ್ಯ | 823,598.00 | 176,142.00 | | 999,740.00 |
| 20 | ಮೈಸೂರು | 789,424.00 | 1,400,041.00 | 626,438.00 | 2,815,903.00 |
| 21 | ಉತ್ತರ ಕನ್ನಡ | 660,923.00 | | | 660,923.00 |
| 22 | ರಾಯಚೂರು | 439,223.00 | | | 439,223.00 |
| 23 | ಉಡುಪಿ | 1,234,106.00 | | | 1,234,106.00 |
| 24 | ದಕ್ಷಿಣ ಕನ್ನಡ | 302,400.00 | 1,605,200.00 | | 1,907,600.00 |
| 25 | ಶಿವಮೊಗ್ಗ | 1,054,871.00 | | | 1,054,871.00 |
| 26 | ತುಮಕೂರು | 1,580,000.00 | 2,400,000.00 | | 3,980,000.00 |
| 27 | ಕೊಡಗು | 617,813.00 | | | 617,813.00 |
| | | 19,982,479.00 | 11,348,293.00 | 2,590,636.00 | 33,921,408.00 |
| | total | 33,921,408.00 | | | |

**** ಟಿಎ/ಡಿಎಗಳನ್ನು ಕೆ.ಸಿ.ಎಸ್.ಆರ್. ನಿಯಮಾನುಸಾರ ನೀಡುವುದು.***
**** ಉಪನ್ಯಾಸಕರಿಗೆ ವಸತಿ ಸಹಿತವಾಗಿದ್ದರೆ 1/4 ಡಿ.ಎ ನೀಡುವುದು.***

**ಆದೇಶ:**

2016-17ನೇ ಸಾಲಿನಲ್ಲಿ ಉಪನ್ಯಾಸಕರುಗಳಿಗೆ 4 ಮತ್ತು 5ದಿನಗಳ (ಪ್ರತಿ ವಿಷಯ/ಬ್ಯಾಚ್‌ಗೆ 16 ಹಾಗೂ 20 ಅಧಿವೇಶನದಲ್ಲಿ) ವಿಷಯಾಧಾರತ ತರಬೇತಿ ಕಾರ್ಯಕ್ರಮವನ್ನು ಜಿಲ್ಲ/ಕ್ಲಸ್ಟರ್, ವಿಭಾಗ ಹಾಗೂ ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮವನ್ನು ನಡೆಸಿರುವುದಕ್ಕೆ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ಕೋರಿರುವಂತೆ ಶೈಕ್ಷಣಿಕ ಸುಧಾರಣೆಯ ಸಲುವಾಗಿ ಲೆಕ್ಕಶೀರ್ಷಿಕೆ: 2202-02-001-0-01-059 (ಯೋಜನೆ)ರಲ್ಲಿ ಒದಗಿಸಿರುವ ಅನುದಾನದಲ್ಲಿ ರಾಜ್ಯದ 31 ಜಿಲ್ಲಾ ಉಪ ನಿರ್ದೇಶಕರಿಗೆ ರೂ 33,921,408/-(ರೂ ಮೂರು ಕೋಟಿ ಮೂವತ್ತ ಒಂಭತ್ತು ಲಕ್ಷದ ಇಪ್ಪತ್ತೊಂದು ಸಾವಿರದ, ನಾಲ್ಕು ನೂರು ಎಂಟು ರೂಗಳನ್ನು ಮಾತ್ರ)ಗಳ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡ ***ಷರತ್ತುಗಳೊಂದಿಗೆ*** ಆದೇಶಿಸಿದೆ.

1. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಜ್ಞಾಪನದಲ್ಲಿ ತಿಳಿಸಿರುವ ನಿಬಂಧನೆಗಳಂತೆ ತರಬೇತಿ ಕಾರ್ಯಕ್ರಮಗಳಿಗೆ ಮಾತ್ರ ವೆಚ್ಚ ಭರಿಸತಕ್ಕದ್ದು.

2. ವೆಚ್ಚಕ್ಕೆ ಸಂಬಂಧಿಸಿದ ವೋಚರ್ಸ್‌ಗಳ ಪರಿಶೀಲನೆ ಮತ್ತು ಪಾವತಿ ಹೊಣೆಗಾರಿಕೆ ಜಿಲ್ಲಾಉಪನಿರ್ದೇಶಕರದೇ ಆಗಿರುತ್ತದೆ.

3. ಸದರಿ ತರಬೇತಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಬಿಡುಗಡೆ ಮಾಡಿದ ಅನುದಾನದಲ್ಲಿ ಉಳಿಕೆ ಆಗಿರುವ ಅನುದಾನವನ್ನು ಮೂರು ದಿನಗಳ ಒಳಗಾಗಿ ಹಿಂದಿರುಗಿಸಲು ಕ್ರಮ ಕೈಗೊಳ್ಳುವುದು.

4. ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನದ ವೆಚ್ಚಕ್ಕೆ ಸಂಬಂಧಿಸಿದಂತೆ ಮಾಸಿಕ ಪ್ರಗತಿ ವರದಿಯನ್ನು **'ಲೆಕ್ಕಪತ್ರಾಧಿಕಾರಿಗಳು, ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012'**. ಇವರಿಗೆ ಸಲ್ಲಿಸತಕ್ಕದ್ದು.

5. ಬಿಡುಗಡೆ ಮಾಡಿರುವ ಅನುದಾನಕ್ಕೆ ಸಂಬಂಧಿಸಿದಂತೆ, ಬಳಕೆ ಪ್ರಮಾಣ ಪತ್ರವನ್ನು ಅತೀಜರೂರಾಗಿ ಇಲಾಖೆಗೆ ಸಲ್ಲಿಸತಕ್ಕದ್ದು.

6. ಅವಶ್ಯಕವಿರುವ ವೆಚ್ಚ ಭರಿಸಿದ ನಂತರ ಬಳಕೆ ಪ್ರಮಾಣ ಪತ್ರವನ್ನು **'ಲೆಕ್ಕಪತ್ರಾಧಿಕಾರಿಗಳು, ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012'**. ಇವರಿಗೆ ಸಲ್ಲಿಸತಕ್ಕದ್ದು.

ಈ ಅನುದಾನವನ್ನು ಸಂಬಂಧಿಸಿದ ತರಬೇತಿ ಕಾರ್ಯಕ್ರಮಕ್ಕೆ ಮಾತ್ರ ಬಳಸತಕ್ಕದ್ದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1. ಸರ್ಕಾರದ ಕಾರ್ಯದರ್ಶಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ),ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು- ಮಾಹಿತಿಗಾಗಿ.
2. ಜಿಲ್ಲಾ ಉಪನಿರ್ದೇಶಕರು ಮಂಗಳೂರು, ಪದವಿ ಪೂರ್ವ ಶಿಕ್ಷಣ ಇಲಾಖೆ ಮುಂದಿನ ಕ್ರಮಕ್ಕಾಗಿ
3. ನಿರ್ದೇಶಕರ ಆಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
4. ಲೆಕ್ಕ ಪತ್ರ ಅಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
5. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
6. ಕಛೇರಿ ಪ್ರತಿ.